ಮಹಿಳೆಗೆ ಬೆನ್ನು ನೋವು ಪ್ರಾರಂಭವಾಗಿತ್ತು.

## ಸ್ವ ಸಮ್ಮೋಹನ (SELF HYPNOSIS)

ಮೈಮೇಲೆ ದೇವರು ದೆವ್ವ ಬರುತ್ತವೆ!

ಎಮಲಿ ಕೋಯ (EMILE, COUE 1857-1926) ಸೃಷ್ಟಿಸಿದ ಪದ **SELF HYPNOSIS** ಸ್ವಸಮ್ಮೋಹನ! ಚಿಕಿತ್ಸಕ ಅಥವಾ ಸಮ್ಮೋಹಕನು 'ನಿನ್ನ ದೃಷ್ಟಿ–ಮನಸ್ಸನ್ನು ಕೇಂದ್ರೀಕರಿಸು. ನಿದ್ರೆ ಮಾಡು.. ವಿರಮಿಸು..' ಎಂಬಿತ್ಯಾದಿ ಸೂಚನೆಗಳನ್ನು ಕೊಡದೇ ವ್ಯಕ್ತಿಯು ತನಗೆ ತಾನೇ ಸೂಚನೆ ಕೊಟ್ಟುಕೊಂಡು 'ಹಿಪ್ನಾಟಿಕ್ ಸ್ಥಿತಿ'ಗೆ ಇಳಿಯಬಹುದು. **SELF HYPNOSIS** ಮಾಡಿಕೊಂಡು ನಿಮ್ಮ ಕ್ರಿಯೆ– ಪ್ರಕ್ರಿಯೆಗಳನ್ನು ವ್ಯಕ್ತಿತ್ವವನ್ನು ಸುಧಾರಿಸಿಕೊಳ್ಳಿ. ಏಕಾಗ್ರತೆ, ನೆನಪನ್ನು ಉತ್ತಮಪಡಿಸಿ ಎಂದು ಜನರನ್ನು ಆಹ್ವಾನಿಸುವ ಕೇಂದ್ರಗಳಿವೆ. ನಿಮಗೆ ತರಬೇತಿ ಕೊಡುವವರಿದ್ದಾರೆ.

ಮೈಮೇಲೆ ದೇವರು ದೆವ್ವ ಬರುವುದು. ಉನ್ಮಾದದ ರೋಗ ಲಕ್ಷಣಗಳು ಕಾಣಿಸಿಕೊಳ್ಳುವುದು 'ಸ್ವ ಸಮ್ಮೋಹನದ' ಕೆಲವು ಉದಾಹರಣೆಗಳು.

ಲಕ್ಷ್ಮಿಗೆ ಇನ್ನೂ 18 ವರ್ಷ. ದೊಡ್ಡ ಮನೆಯ ಚಿಕ್ಕ ಸೊಸೆ. ಎಲ್ಲರೂ ಅವಳನ್ನು 'ಚಿಕ್ಕೋಳೆ' ಎಂದು ಕರೆಯುತ್ತಾರೆ. ಲಕ್ಷ್ಮಿ ಎನ್ನುವುದಿಲ್ಲ. ಅವಳಿಗೆ ಯಾವ ಸ್ಥಾನಮಾನವೂ ಇಲ್ಲ. ಅವಳ ಗಂಡ ಮಿತಭಾಷಿ. ಸಂಕೋಚ ಪ್ರವೃತ್ತಿಯವ. ಲಕ್ಷ್ಮಿಗೆ ಆ ದೊಡ್ಡಮನೆ ಚಿನ್ನದ ಪಂಜರ. ಸ್ವಾತಂತ್ರ್ಯವಿಲ್ಲ. ಆ ಮನೆಯ ಕುಲದೇವತೆ ಲಕ್ಷ್ಮಿದೇವಿ. ವರ ಮಹಾಲಕ್ಷ್ಮಿ ಹಬ್ಬದ ಆಚರಣೆ ಬಲು ಜೋರು. ಲಕ್ಷ್ಮಿಯ ಮಾವನ ತಾಯಿಯವರ ಮೇಲೆ 'ದೇವಿ' ಬರುತ್ತಿದ್ದಳಂತೆ. ತನ್ನ ಅತ್ತೆಯಿಂದ ಈ ವಿವರಣೆಯನ್ನು ಕೇಳಿದ ಲಕ್ಷ್ಮಿಗೆ ಆ ದೇವರು ತನ್ನ ಮೈಮೇಲೆ ಬಂದರೆ ಎಷ್ಟು ಚೆನ್ನ ಎಂದುಕೊಂಡಳು. ಹಬ್ಬ ಬಂತು. ನೂರಾರು ಜನ ನೆರೆದಿದ್ದಾರೆ. ಪೂಜಾ ವೈಭವ ಕಣ್ಣು ಕುಕ್ಕುವಂತಿದೆ. ದೊಡ್ಡ ಬೆಳ್ಳಿ ವಿಗ್ರಹವನ್ನು ನೋಡುತ್ತಾ ಲಕ್ಷ್ಮಿ ಭಕ್ತಿ ಪರವಶಳಾದಳು. ಅಮ್ಮ, ಲಕ್ಷ್ಮಿದೇವಿ ನನ್ನನ್ನು ಅನುಗ್ರಹಿಸಮ್ಮ ಎಂದು ಬೇಡಿಕೊಂಡಳು, ಬೆಳಕೊಂದು ವಿಗ್ರಹದಿಂದ ತನ್ನಲ್ಲಿಗೆ ಬಂದಂತೆ ಕಂಡಿತು. ಅವಳ ಮೇಲೆ ದೇವಿಯ ಆವಾಹನೆಯಾಯಿತು. ಅಭಯ ಮುದ್ರೆಯಲ್ಲಿ ಕುಳಿತಳು. ದೈವೀಕಳೆಯಿಂದ ಅವಳ ಮುಖ ರಾರಾಜಿಸಿತು. 'ಮಕ್ಕಳೇ ನಿಮಗೆ ಶುಭವಾಗಲಿ' ಎಂದಳು. ಪಕ್ಕಕ್ಕೆ ವಾಲಿಕೊಂಡು ಪ್ರಜ್ಞಾಹೀನಳಾದಳು. ಆಕೆಯ ಅತ್ತೆ ಮಾವಂದಿರೂ ಸೇರಿದಂತೆ, ಎಲ್ಲರೂ ಅವಳ ಕಾಲು ಮುಟ್ಟಿ ನಮಸ್ಕಾರ ಮಾಡಿದರು. ಜ್ಞಾನ ಬಂದ ಮೇಲೆ 'ನನಗೇನಾಯಿತು' ಎಂದು ಲಕ್ಷ್ಮಿ ಕೇಳಿದಳು. 'ನೀನು ಪುಣ್ಯವಂತೆಯಮ್ಮ, ಅಮ್ಮ ನಿನ್ನ ಮೇಲೆ ಬಂದಿದ್ದಳು. ಇನ್ನು ನಮ್ಮೆಲ್ಲ ಕಷ್ಟ ನೋವುಗಳನ್ನು ನೀನೇ ಪರಿಹರಿಸಬೇಕು ದೇವಿ ಒಲಿದ ನೀನು ಸಾಮಾನ್ಯಳಲ್ಲ' ಎಂದರು. ಈಗ ಲಕ್ಷ್ಮಿ ದೊಡ್ಡ ಮನೆಯ ದೊಡ್ಡ ವ್ಯಕ್ತಿ!

ತನ್ನ ಗೆಳತಿ ಜಯಳ ದುರಂತ ಸಾವನ್ನು ನೆನೆದು ಗೌರಿ ಕಣ್ಣೀರಿಟ್ಟಳು. ಕುಡುಕ, ಕಟುಕ ಮತ್ತು ವ್ಯಭಿಚಾರಿ ಗಂಡನ ಹಿಂಸೆ ತಾಳಲಾರದೇ ಜಯ ನೀರಿಗೆ ಬಿದ್ದು ಸತ್ತಿದ್ದಳು. ಅವಳು ದೆವ್ವವಾಗಿದ್ದಾಳೆ. ಗಂಡ ಮತ್ತು ಸವತಿಯನ್ನು ಸುಮ್ಮನೆ ಇರಲು ಬಿಡುವುದಿಲ್ಲ ಎಂದು ಜನ ಮಾತಾಡಿಕೊಂಡರು. ಗೌರಿಯ ಸಂಸಾರವೂ ಚೆನ್ನಾಗಿಲ್ಲ. ಗಂಡ ಮಹಾಲಿಂಗ ದರ್ಪಿಷ್ಟ, ಒರಟ ಮತ್ತು ಹೆಂಗಸರ ಶೋಕಿಗೆ ಬಿದ್ದವ. ಗೌರಿಯ ಅತ್ತೆ ಮಗನನ್ನೇ ಹೊಗಳುತ್ತಾಳೆ, ಎಷ್ಟಾದರೂ ಅವನು ಗಂಡಸು ಎನ್ನುತ್ತಾಳೆ. ಬೇಡಿದಳು, ಕಣ್ಣೀರಿಟ್ಟಳು. ಗಂಡ ಮತ್ತು ಅತ್ತೆ ಬದಲಾಗಲಿಲ್ಲ. ಒಂದು ದಿನ ಗೌರಿಯ ಮೇಲೆ ಜಯಳ ದೆವ್ವ ಕಾಣಿಸಿಕೊಂಡಿತು! 'ಎಲ್ಲಿ ಕರೆಯಿರಿ ಆ ಕಚ್ಚೆ ಹರುಕ ಲಿಂಗನನ್ನು' ಎಂದು ಬೊಬ್ಬೆ ಹಾಕಿತು. 'ನನ್ನ ಸ್ನೇಹಿತೆ ಗೌರಿಗೆ ಅನ್ಯಾಯ ಮಾಡುತ್ತಿರುವ ಗಂಡ ಲಿಂಗನ ಲಿಂಗವನ್ನು ಕತ್ತರಿಸುತ್ತೇನೆ. ಅತ್ತೆ ದುರ್ಗಮ್ಮನ ನಾಲಿಗೆಯನ್ನು ಸೀಳುತ್ತೇನೆ' ಎಂದು ಘರ್ಜಿಸಿತು. ಹೆದರಿದ ಮಹಾಲಿಂಗ ಮತ್ತು ಅವನ ತಾಯಿ ತಪ್ಪಾಯಿತೆಂದು ಕ್ಷಮೆ ಕೇಳಿದರು. ಇನ್ನು ಮುಂದೆ ಗೌರಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತೇವೆಂದು ಮಾತು ಕೊಟ್ಟರು. ಜಯಳ ದೆವ್ವ ಕೇಕೆ ಹಾಕಿತು. 'ಇನ್ನೊಮ್ಮೆ ನೀವು ಗೌರಿಯ ಕಣ್ಣಲ್ಲಿ ಕಣ್ಣೀರು ತರಿಸಿದರೆ ನಿಮ್ಮ ಪ್ರಾಣ ತೆಗೆಯುತ್ತೇನೆ' ಎಂದಿತು, ಪ್ರಜ್ಞೆ ತಪ್ಪಿ ಬಿದ್ದ ಗೌರಿ ಎಚ್ಚರಗೊಂಡಾಗ, 'ನನಗೇನಾಯಿತು ನೀವೆಲ್ಲ ಏಕೆ ಇಲ್ಲಿ ಸೇರಿದ್ದೀರಿ?' ಎಂದಳು. ಜಯಳ ದೆವ್ವ ಗಂಡ ಅತ್ತೆಯ ಬೆವರಿಳಿಸಿದ್ದು ಆಕೆಗೆ ಗೊತ್ತೇ ಇರಲಿಲ್ಲ. ತನ್ನ ಮನಸ್ಸಿನಲ್ಲಿ ಹೆಪ್ಪುಗಟ್ಟಿದ್ದ ಆಕ್ರೋಶ ಮತ್ತು ನೋವನ್ನು ಹೊರಹಾಕಿ ನಿರಾಳವಾಗಿದ್ದಳು. ಎಲ್ಲರೂ ಹೆಂಡತಿಗೆ ನಿಷ್ಠೆಯಿಂದಿರು ಎಂದು ಮಹಾಲಿಂಗನಿಗೆ ಬುದ್ಧಿ ಹೇಳಿದರು.

ನೆನಪಿಡಿ: ಹಿಪ್ನೊಸಿಸ್ ಮತ್ತು ಸಮ್ಮೋಹಕನಿಗೆ ಇತಿ ಮಿತಿ ಇದೆ. ಸೀಮಿತ ಪ್ರಮಾಣದಲ್ಲಿ ಹಿಪ್ನೊಸಿಸ್ ಉಪಯುಕ್ತ. ಆದರೆ ಅದು ಪವಾಡ ಮಾಡಲಾರದು. ಅತೀಂದ್ರೀಯ ಶಕ್ತಿ ಅದಕ್ಕಿಲ್ಲ . ಹಿಪ್ನೊಸಿಸ್ ಅನ್ನು ದುರ್ಬಳಕೆ ಮಾಡುವವರ ಬಗ್ಗೆ ಎಚ್ಚರವಿರಲಿ.

